ಮೈಸೂರು ವಿಶ್ವವಿದ್ಯಾನಿಲಯ

## ಶಾಂತಿ ಕಲಾ,ವಿಜ್ಞಾನ ಹಾಗೂ ವಾಣಿಜ್ಯ ಕಾಲೇಜು.
## ಮಳವಳ್ಳಿ.ಮಂಡ್ಯ ಜಿಲ್ಲೆ.

### ರಂಗಬಂಡಿಯ ಜನಪದ ಮತ್ತು ರಂಗಕಲೆಗಳ ಚಟುವಟಿಕಗಳ ಸಮಾರೋಪ ಸಮಾರಂಭ
### ಕಾರ್ಯಕ್ರಮ ವರದಿ;

ಸ್ಥಳ : ಕೆ.ಎನ್ ನಾಗೇಗೌಡ ರಂಗಮಂದಿರ ದಿನಾಂಕ :16-02-2023

ಶಾಂತಿ ಕಲಾ,ವಿಜ್ಞಾನ ಹಾಗೂ ವಾಣಿಜ್ಯ ಕಾಲೇಜು. ಮಳವಳ್ಳಿಯ ಸಾಂಸ್ಕೃತಿಕ ಸಮಿತಿ ಹಾಗೂ 'ರಂಗಬಂಡಿ'- ಕಲಾತಂಡದ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ಒಂದು ತಿಂಗಳ ಉಚಿತ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಒಂದು ತಿಂಗಳ ಕಾಲ ನಡೆದ ಈ ತರಬೇತಿ ಕಾರ್ಯಕ್ರಮದಲ್ಲಿ ಮಧುಕರ ಮಳವಳ್ಳಿ, ಮಧು ಮಳವಳ್ಳಿ ಹಾಗೂ ಉಮಾಶ್ರೀ ಜಿ.ಕೂಡ್ಲಿಗಿಯವರು ಸತತ ಪರಿಶ್ರಮ ವಹಿಸಿ ನಮ್ಮ ವಿದ್ಯಾರ್ಥಿಗಳಿಗೆ ನಾಟಕದ ಹಲವಾರು ಮಟ್ಟುಗಳನ್ನು ಕರಗತ ಮಾಡಿಸಿದರು. ನಮ್ಮ ಕಾಲೇಜಿನ ವಿದ್ಯಾರ್ಥಿಗಳೂ ಸಹ ತಮ್ಮ ಅಮೂಲ್ಯವಾದ ಸಮಯವನ್ನು ನಾಟಕ ತರಬೇತಿಗೆ ಮುಡಿಪಾಗಿಟ್ಟು ಶ್ರದ್ಧೆಯಿಂದ ಕಲಿತಿರುತ್ತಾರೆ. ವಿದ್ಯಾರ್ಥಿಗಳ ಕಲೆಯನ್ನು ಒರೆಗೆ ಹಚ್ಚುವ ಸಮಯವೆಂದರೆ, ಉಚಿತ ತರಬೇತಿ ಶಿಬಿರದ ಸಮಾರೋಪ ಸಮಾರಂಭ. ಈ ದಿನ ನಮ್ಮ ವಿದ್ಯಾರ್ಥಿಗಳು ನಾಟಕದ ಒಂದು ಪ್ರಸಂಗವನ್ನು ಪ್ರದರ್ಶನ ಮಾಡಲು ಇಷ್ಟಪಟ್ಟ ಕಾರಣ ಸಂಸ್ಥೆಯ ಆಡಳಿತ ಮಂಡಳಿ ಹಾಗೂ ಪ್ರಾಂಶುಪಾಲರ ಅನುಮತಿಯನ್ನು ಪಡೆದು ದಿನಾಂಕ 16-02-2023 ರ ಗುರುವಾರ ಸಂಜೆ 6.00 ಗಂಟೆಯಿಂದ 8.30 ರ ವರೆಗೆ ಡಾ.ಚಂದ್ರು ಕಾಳೇನಹಳ್ಳಿರವರು ರಚಿಸಿರುವ **'ಗಂಗೆ-ಗೌರಿ ಪ್ರಸಂಗ** 'ನಾಟಕದ ಒಂದು ಪ್ರಸಂಗವನ್ನು ಪ್ರದರ್ಶನ ಮಾಡಲು ನಿಶ್ಚಯಿಸಲಾಯಿತು.

ಅಂದು ಸಂಜೆ ನಡೆಯುವ ನಾಟಕಕ್ಕೆ ಸರ್ವ ಸನ್ನದ್ಧಗೊಂಡ ಶಾಂತಿ ಕಾಲೇಜಿನ ಬಯಲು ರಂಗ ಮಂದಿರ ಬಣ್ಣ-ಬಣ್ಣದ ವಿದ್ಯುತ್ ದೀಪಗಳಿಂದ ಸಿದ್ಧಗೊಂಡಿತು. ನಾಟಕ ಪ್ರದರ್ಶನಕ್ಕೆ ಮುನ್ನ ಸರಳ ವೇದಿಕೆ ಕಾರ್ಯಕ್ರಮ ಜರುಗಿತು. ಈ ಕಾರ್ಯಕ್ರಮದಲ್ಲಿ ಶಾಂತಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಎಂ.ಹೆಚ್ ಕೆಂಪಯ್ಯನವರು, ಶಾಂತಿ ಪದವಿ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಡಾ.ಕೆ.ಎಂ ಜಗನ್ನಾಥ್ ರವರು ಹಾಗೂ ಶಾಂತಿ ಪದವಿ ಕಾಲೇಜಿನ ಸಾಂಸ್ಕೃತಿಕ ಸಮಿತಿಯ ಸಂಚಾಲಕರಾದ ಶ್ರೀ ಬಿ.ಯೋಗಾನಂದರವರು ಉಪಸ್ಥಿತರಿದ್ದರು.ಮುಖ್ಯ ಅತಿಥಿಗಳಾಗಿ ಮಧುಕರ್ ಎಂ.ಎಲ್ ರವರು ಹಾಗೂ ಕೃಷ್ಣರವರು ನಿವೃತ್ತ ಪ್ರಾಂಶುಪಾಲರು ಭಾಗವಹಿಸಿದ್ದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹೆಚ್.ಜನಾರ್ಧನ(ಜನ್ನಿ) ರವರು ವಹಿಸಿದ್ದರು.






ಸಮಾರೋಪ ದಿನಾಂಕ 16-02-2023 ರ ಸೋಮವಾರದಂದು ಚಾಲನೆ ನೀಡುವ ಸಲುವಾಗಿ ಉದ್ಘಟನಾ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಗಳಾಗಿ ಶ್ರೀ ಪುಟ್ಟರಾಜುರವರು. ಶಾಂತಿ ಸೇವಾ ಟ್ರಸ್ಟ್‌ನ ಕಾರ್ಯದರ್ಶಿಗಳು. ಮಳವಳ್ಳಿ.ಇವರು ಉಪಸ್ಥಿತರಿದ್ದರು. ಶಾಂತಿ ಪದವಿ ಕಾಲೇಜಿನ ಪ್ರಭಾರ ಪ್ರಾಂಶುಪಾಲರಾದ ಸಿ.ಎಂ.ನಾಗರಾಜುರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಂಗಕರ್ಮಿಗಳಾದ ಮಧುಕರ್ ಎಂ.ಎಲ್ ರವರು ಉದ್ಘಾಟನಾ ಭಾಷಣಕಾರರಾಗಿ ಆಗಮಿಸಿದ್ದರು.

ಕಾರ್ಯಕ್ರಮವು ಸಂಜೆ 6.00 ಗಂಟೆಗೆ ಪ್ರಾರಂಭವಾಯಿತು. ಬಣ್ಣ-ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕಾರಗೊಂಡಿದ್ದ ವೇದಿಕೆಯ ಮೇಲೆ ಮೊದಲಿಗೆ ಕುಮಾರಿ. ಯಷಿಕಾ ದ್ವಿತೀಯ ಬಿ.ಎಸ್ಸಿ ಯವರಿಂದ ಭರತನಾಟ್ಯವನ್ನು ಆಯೋಜಿಸಲಾಗಿತ್ತು. ವಿದ್ಯಾರ್ಥಿಯ ನಾಟ್ಯ ನೋಡುಗರ ಮನ ತಣಿಸಿತು. ನಂತರ 'ರಂಗ ಬಂಡಿ'ಯಿಂದ ತರಬೇತಿ ಪಡೆದ ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಂದ **'ಗಂಗೆ ಗೌರಿ ಪ್ರಸಂಗ'** ನಾಟಕ ನಡೆಯಿತು. ವಿದ್ಯಾರ್ಥಿಗಳು ಬಹಳ ಚೆನ್ನಾಗಿ ನಾಟಕವನ್ನು ಪ್ರಸ್ತುತಪಡಿಸಿದರು. ಇದಕ್ಕೆ ಕಾಲೇಜಿನ ಆಡಳಿತ ವರ್ಗ, ಶಾಂತಿ ಕಾಲೇಜಿನ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಪೋಷಕರು-ಸಾರ್ವಜನಿಕರು ಸಾಕ್ಷಿಯಾದರು. ಈ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಕಾವ್ಯ.ಜೆ ವಾಣಿಜ್ಯ ವಿಭಾಗ, ಇವರು ನಡೆಸಿಕೊಟ್ಟರು.






ನಾಟಕದಲ್ಲಿ ನಿರೂಪಿತವಾದ ಹಲವು ದೃಶ್ಯಾವಳಿಗಳು:




















ಹೀಗೆ ಶಾಂತಿ ಕಾಲೇಜಿನ ಆಡಳಿತ ಮಂಡಳಿ,ಪ್ರಾಂಶುಪಾಲರುಗಳ ಹಾಗೂ ಸಾಂಸ್ಕೃತಿ ಸಮಿತಿಯ ಸದಸ್ಯರ ಸಹಕಾರದಿಂದ ಈ ಕಾರ್ಯಕ್ರಮ ಯಶಸ್ವಿಯಾಗಿ ಪೂರ್ಣಗೊಂಡಿತು.

1. B. Y...
2. Kanyaj
3. ...

ಪ್ರಾಂಶುಪಾಲರು
ಶಾಂತಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು
ಮಳವಳ್ಳಿ - 571 430.